ಓ .ಎಸ್ ನಂಃ 46/2016
ಡಿಡಬ್ಲ್ಯೂಃ 3
ದಿನಾಂಕಃ 26.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಪಿ ವಕೀಲರಿಂದಃ

ವಾದಿಗಳು ಮತ್ತು 2 ರಿಂದ 4 ಪ್ರತಿವಾದಿಗಳು ನನ್ನ ಮಕ್ಕಳು ಎಂದರೆ ಸರಿ . ಇವರೆಲ್ಲಾ ಒಟ್ಟು ಕುಟುಂಬದಲ್ಲೇ ಇರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳು ನಮ್ಮ ತಂದೆಯ ಪಿತ್ರಾರ್ಜಿತ ಸ್ವತ್ತುಗಳು ಎಂದರೆ ಸರಿ . ದಾವಾ ಸ್ವತ್ತುಗಳ ಸಂಬಂಧ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿ .

ಮರು ವಿಚಾರಣೆಃ ಇಲ್ಲ

ಪಾಟೀ ಸವಾಲುಃ 2 ನೇ ಪ್ರತಿವಾದಿ ವಾರಸುದಾರರ ಪರ ಶ್ರೀ ಪಿ ಎನ್ ಕೆ ವಕೀಲರಿಂದಃ

ನನಗೆ ಮಾತನಾಡುವುದು ಸ್ಪಷ್ಟವಾಗಿ ಕೇಳಿಸುತ್ತಿದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ . ಅದೇ ರೀತಿ ಸದರಿ ಮುಖ್ಯ ವಿಚಾರಣೆಯಲ್ಲಿ ಏನೆಲ್ಲಾ ಸಂಗತಿಗಳು ಇದೆ ಎಂದು ನನ್ನ ವಕೀಲರ ಮುಖಾಂತರ ಕೇಳಿ ತಿಳಿದುಕೊಂಡಿರುತ್ತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನದೇ . ನನ್ನ ಸಾಕ್ಷಿಯನ್ನು ನಾನು ಬೇರೆಯವರ ಪರವಾಗಿಯೂ ಹೇಳುತ್ತಿದ್ದೇನೆಯೇ ಅಂದರೆ ಇಲ್ಲ ಎನ್ನುತ್ತಾರೆ. 4 ನೇ ಪ್ರತಿವಾದಿ ನನ್ನ ಮಗಳು . ನನ್ನ ಮಗಳು ಅವರ ಪರವಾಗಿ ಸಾಕ್ಷಿ ನುಡಿಯಲು ನನಗೆ ಅಧಿಕಾರವನ್ನು ನೀಡಿರುತ್ತಾರೆಯೇ ಅಂದರೆ ಇಲ್ಲ ಎನ್ನುತ್ತಾರೆ. ನಾನು ಮತ್ತು ನನ್ನ ಮಗಳು ತಕರಾರಿನಲ್ಲಿ ಏನು ಅಂಶಗಳನ್ನು ಉಲ್ಲೇಖಿಸಿರುತ್ತೇನೆ ಎಂದು ನನಗೆ ತಿಳಿದಿದೆಯಾ ಅಂದರೆ ಇಲ್ಲ ಎನ್ನುತ್ತಾರೆ. ದಿನಾಂಕ 20.09.2003 ರಲ್ಲಿ ನಮ್ಮ ಕುಟುಂಬದಲ್ಲಿ ಒಂದು ವಿಭಾಗ ಪತ್ರವಾಗಿದ್ದು ಆ ಬಗ್ಗೆ ನನಗೆ ಮಾಹಿತಿ ಇದೆಯಾ ಅಂದರೆ ಇಲ್ಲ ಎನ್ನುತ್ತಾರೆ. ನಿಪಿ 3 ರಲ್ಲಿರುವ 1 ರಿಂದ 3 ನೇ ಪುಟದಲ್ಲಿ ಇರುವ ಮೊದಲ ಸಹಿ ನನ್ನದೇ .ಅದೇ ರೀತಿ ನಿಪಿ 3 ರಲ್ಲಿ ನನ್ನ ಪೋಟೋ ಸಹ ಇದೆ ಎಂದರೆ ಸರಿ . ಒಟ್ಟು ಕುಟುಂಬದ ಆಸ್ತಿ 2003 ರಲ್ಲಿ ನೊಂದಾಯಿತ ವಿಭಾಗದ ಪತ್ರದ ಮೂಲಕ ವಿಭಾಗವಾಗಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 3 ರ ಪ್ರಕಾರ ಬಿ ಶೆಡ್ಯೂಲ್ ಆಸ್ತಿ ನನ್ನ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. ಸದರಿ ಬಿ ಶೆಡ್ಯೂಲ್ ಪ್ರಕಾರ ಸರ್ವೆ ನಂಬರ್ 152/2 ರಲ್ಲಿ 34 ಗುಂಟೆ , ಸರ್ವೆ ನಂಬರ್ 152/4 ರಲ್ಲಿ 32 ಗುಂಟೆ , ಸರ್ವೆ ನಂಬರ್ 152/6 ರಲ್ಲಿ 38 ಗುಂಟೆ , ಸರ್ವೆ ನಂಬರ್

164/1 ರಲ್ಲಿ 1 ಎಕರೆ 33 ಗುಂಟೆ ಬಂದಿರುತ್ತದೆ ಎಂದರೆ ಸರಿ . ಸರ್ವೆ ನಂಬರ್ 164/1 ರಲ್ಲಿ ಇರುವ 1 ಎಕರೆ 33 ಗುಂಟೆ ಜಮೀನನ್ನು 4 ನೇ ಪ್ರತಿವಾದಿಯ ಮದುವೆಗೆ ಮೀಸಲಾಗಿ ನಿಪಿ 3 ರಲ್ಲಿ ಹೇಳಿ ನೀಡಲಾಗಿದೆ ಎಂದರೆ ಸರಿ , ಸಾಕ್ಷಿ ಮುಂದುವರೆದು ಅದನ್ನು ಮಾರಿ ಮಗಳ ಮದುವೆ ಮಾಡಿರುತ್ತೇನೆ ಎನ್ನುತ್ತಾರೆ. ಸದರಿ ಜಮೀನನ್ನು ಯಾವಾಗ ಮತ್ತು ಯಾರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ನಮ್ಮ ಊರಿನ ನಂಜುಂಡಪ್ಪ ಎನ್ನುವವರಿಗೆ ಮಾರಾಟ ಮಾಡಿದ್ದು ಯಾವ ವರ್ಷದಲ್ಲಿ ಮಾರಾಟ ಮಾಡಿರುತ್ತೇನೆ ನೆನಪಿಲ್ಲ ಎನ್ನುತ್ತಾರೆ. ಸರ್ವೆ ನಂಬರ್ 164/1 ,ವಿಸ್ತೀರ್ಣ 1 ಎಕರೆ 33 ಗುಂಟೆ ಜಮೀನು ನನ್ನ ಮತ್ತು ನನ್ನ ಮಗಳಾದ 4 ನೇ ಪ್ರತಿವಾದಿಗೆ ಹೆಸರಿಗೆ ಜಂಟಿಯಾಗಿದೆ ಎಂದು ಸಾಕ್ಷಿಗೆ ಸದರಿ ಸರ್ವೆ ನಂಬರ್ ಗೆ ಸಂಬಂಧಿಸಿದ ಒಂದು ಆರ್ ಟಿ ಸಿ ತೋರಿಸಲಾಗಿ ಒಪ್ಪಿದ ಮೇರೆಗೆ ಅದನ್ನು ನಿಡಿ 17 ಎಂದು ಗುರುತಿಸಲಾಯಿತು.

ನಿಪಿ 3 ರಲ್ಲಿ ನನ್ನ ಭಾಗಕ್ಕೆ ಬಂದಂತಹ ಎಲ್ಲಾ ಆಸ್ತಿಗಳನ್ನು ವಿಭಾಗ ಪತ್ರದ ಆಧಾರದ ಮೇರೆಗೆ ನನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ 3 ರ ನನ್ನ ಭಾಗಕ್ಕೆ ಬಂದ ಬಿ ಶೆಡ್ಯುಲ್ ಆಸ್ತಿಯ ಮೇಲೆ ನನಗೆ ಮಾತ್ರ ಹಕ್ಕಿದೆ ಎಂದರೆ ಎಲ್ಲರಿಗೂ ಹಕ್ಕಿದೆ ಎನ್ನುತ್ತಾರೆ. ಸರ್ವೆ ನಂಬರ್ 152/2 , 152/4, 152/6 ಕ್ಕೆ ಸಂಬಂಧಿಸಿದ 3 ಪಹಣಿಗಳನ್ನು ತೋರಿಸಿ ಇವುಗಳ ಪ್ರಕಾರ ಸದರಿ ಸ್ವತ್ತುಗಳು ನನ್ನ ಮತ್ತು 4 ನೇ ಪ್ರತಿವಾದಿ ಹೆಸರಿಗೆ ಜಂಟಿ ಖಾತೆಯಾಗಿದೆ ಎಂದು ಕೇಳಲಾಗಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ರೂಪಾರವರ ಹೆಸರಿಗೆ ಮೇಲೆ ಹೇಳಿದ ಸ್ವತ್ತುಗಳ ಖಾತೆ ಬದಲಾವಣೆ ಯಾವ ಆಧಾರದ ಮೇರೆಗೆ ಆಗಿದೆ ಎಂದು ಹೇಳಲು ಸಾಧ್ಯವೇ ಅಂದರೆ ಇಲ್ಲ ಎನ್ನುತ್ತಾರೆ. ನಿಪಿ 3 ರಲ್ಲಿ ನನ್ನ ಮಗಳ ಪೋಟೋ ಮತ್ತು ಸಹಿ ಇದೆ ಎಂದರೆ ಸರಿ . ನಿಪಿ 3 ರಲ್ಲಿ 4 ನೇ ಪ್ರತಿವಾದಿ ಹೆಸರಿಗೆ ಯಾವುದೇ ಭಾಗ ಹೋಗಿಲ್ಲ ಎಂದರೆ ಸರಿ , ಸಾಕ್ಷಿ ಮುಂದುವರೆದು ಭಾಗ ಹೋಗಬೇಕು ಎನ್ನುತ್ತಾರೆ. ನಿಪಿ 3 ರ ಪ್ರಕಾರ 4 ನೇ ಪ್ರತಿವಾದಿಯ ಮದುವೆ ಖರ್ಚಿಗೆ ಮೀಸಲಾದ ಸರ್ವೆ ನಂಬರ್ 164/1 ರ ವಿಸ್ತೀರ್ಣ 1 ಎಕರೆ 33 ಗುಂಟೆ ಹೊರತುಪಡಿಸಿ ಬೇರೆ ಯಾವುದೇ ಆಸ್ತಿಯಲ್ಲಿ ಅವರಿಗೆ ಪಾಲು ಇಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ಮಾರಾಟ ಮಾಡಿದ ಸಂಬಂಧ ನನ್ನ ವಿಚಾರಣೆ ಸಮಯದಲ್ಲಿ ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿರುತ್ತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ. ನಿಪಿ 3 ರಲ್ಲಿ ಬಿ ಶೆಡ್ಯುಲ್ ಆಸ್ತಿಗೆ ಸಂಬಂದ ಪಟ್ಟಂತೆ ನಕಲಿ

ದಾಖಲೆಗಳನ್ನು ಸೃಷ್ಟಿಮಾಡಿ ನನ್ನ ಮತ್ತು 4 ನೇ ಪ್ರತಿವಾದಿ ಹೆಸರಿಗೆ ಜಂಟಿ ಖಾತೆಯನ್ನು ಮಾಡಲಾಗಿದೆ ಎಂದರೆ ಸರಿಯಲ್ಲ . ನಾನು ಮತ್ತು 4 ನೇ ಪ್ರತಿವಾದಿ ಡಿ ಸಿ ಸಿ ಬ್ಯಾಂಕ್ ನಲ್ಲಿ 8 ಲಕ್ಷ ಸಾಲವನ್ನು ನನ್ನ ಭಾಗಕ್ಕೆ ಬಂದ ಎಲ್ಲಾ ಸ್ವತ್ತುಗಳ ಮೇಲೆ ಮಾಡಿರುತ್ತೇನೆಯೇ ಅಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನನ್ನ ಭಾಗಕ್ಕೆ ಬಂದ ಜಮೀನಿನ ಸ್ವತ್ತುಗಳ ಮೇಲೆ ನನ್ನನ್ನು ಹೊರತುಪಡಿಸಿ ಬೇರೆಯವರಿಗೆ ಸಾಲ ಮಾಡಲು ಸಾಧ್ಯವಿಲ್ಲ ಎಂದರೆ ಸರಿ. ನಾನು ಯಾವುದೇ ಸಾಲ ಮಾಡಿಲ್ಲ , ಯಾರು ಮಾಡಿರುತ್ತಾರೋ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಬ್ಯಾಂಕ್ನಿಂದ ಸಾಲ ಪಡೆಯಲು 4 ನೇ ಪ್ರತಿವಾದಿ ಜಂಟಿ ಖಾತೆ ಸೃಷ್ಟಿಮಾಡಿ ಸಾಲ ಪಡೆದಿರುತ್ತಾರೆ ಎಂದರೆ ಸರಿಯಲ್ಲ .

ಮುಂದುವರೆದ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್ )
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್